ತಾಲ್ಲೂಕು	ನೀರಾವರಿಗಾಗಿ (ಟಿ.ಎಂ.ಸಿ. ಗಳಲ್ಲಿ)	ನೀರಾವರಿ ಪ್ರದೇಶ (ಎಕರೆಗಳಲ್ಲಿ)	ಕೆರೆಗಳನ್ನು ತುಂಬಿಸಲು (ಟಿ.ಎಂ.ಸಿ. . ಗಳಲ್ಲಿ)
II.ಚಿತ್ರದುರ್ಗ ಜಿಲ್ಲೆ			
1. ಹೊಸದುರ್ಗ ತಾ:	2.62	47,941	0.60
2. ಹಿರಿಯೂರು ತಾ:	6.59	1,20,609	0.18
3. ಚಿತ್ರದುರ್ಗ ತಾ:	2.33	42,630	0.30
4. ಚಳ್ಳಕೆರೆ ತಾ:	1.44	26,445	0.83
ಒಟ್ಟು (ಬಿ)	**12.98**	**137,626**	**1.91**
III. ತುಮಕೂರು ಜಿಲ್ಲೆ			
1. ಸಿರಾ ತಾ:	–	–	1.49
2. ಕೊರಟಗೆರೆ ತಾ:	–	–	0.33
3. ಮಧುಗಿರಿ ತಾ:	–	–	1.18
ಒಟ್ಟು (ಸಿ)	–	–	**3.00**
IV.ಕೋಲಾರ ಜಿಲ್ಲೆ			
1. ಕೋಲಾರ ತಾ:	–	–	2.60
ಒಟ್ಟು (ಡಿ)	–	–	**2.60**
ಒಟ್ಟು (ಎ+ಬಿ+ಸಿ+ಡಿ)	**13.87**	**2,54,023**	**7.626**

986 (1182) ಶ್ರೀ ಆಂಜನೇಯ ಹೆಚ್. (ಭರಮಸಾಗರ): ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ;

ಅ) ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅರೆಕಾಲಿಕ ಉಪನ್ಯಾಸಕರುಗಳ ಸಂಖ್ಯೆ ಎಷ್ಟು; ಇವರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಸಂಖ್ಯೆ ಎಷ್ಟು;

ಆ) ಅರೆಕಾಲಿಕ ಉಪನ್ಯಾಸಕರಾಗಿ ಸುಮಾರು ಎಷ್ಟು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ, ಇವರುಗಳನ್ನು ಖಾಯಮಾತಿ ಮಾಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುವುದು;

ಇ) ಇವರುಗಳನ್ನು ಖಾಯಮಾತಿ ಮಾಡಲು ಸರ್ಕಾರ ಏನಾದರೂ ನೀತಿ ನಿಯಮಗಳನ್ನು ಅನುಸರಿಸಲಾಗುತ್ತಿದೆಯೆ;

ಈ) ಇದುವರೆವಿಗೂ ಖಾಯಮಾತಿ ಮಾಡದಿರಲು ಕಾರಣವೇನು;

ಉ) ಯಾವಾಗ ಖಾಯಮಾತಿ ಮಾಡಲಾಗುವುದು?

ಶ್ರೀ ಡಿ.ಎಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು)

ಅ) ಅರೆಕಾಲಿಕ ಉಪನ್ಯಾಸಕರ ಸಂಖ್ಯೆ: 1149, ಇವರಲ್ಲಿ ಪರಿಶಿಷ್ಟ ಜಾತಿಗೆ ಸೇರಿದವರು 168 ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವರು 38 ಆಗಿರುತ್ತಾರೆ.

ಆ) ದಿನಾಂಕ:22.01.97, ಸಂಖ್ಯೆ: ಡಿಪಿಎಆರ್ 48 ಎಸ್ಆರ್ಇ 96ರ ಸರ್ಕಾರಿ ಅಧಿಸೂಚನೆಯಲ್ಲಿ ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 1993–94 ಮತ್ತು 1994–95ನೇ ಸಾಲಿನಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸಿರುವ ಅರೆಕಾಲಿಕ ಉಪನ್ಯಾಸಕರನ್ನು ಇಲಾಖೆಯ ಉಪನ್ಯಾಸಕರ ಹುದ್ದೆಯಲ್ಲಿ ಸೇವಾ ಸಕ್ರಮಾತಿ ಹೊಂದಲು ಪರಿಗಣಿಸಲಾಗಿದೆ. ಸದರಿ 1993–94 ಮತ್ತು 1994–95ನೇ ಸಾಲಿಗಿಂತ ಪೂರ್ವದಲ್ಲಿ ಸುಮಾರು 8 ರಿಂದ 10 ವರ್ಷ ಸೇವೆ ಸಲ್ಲಿಸಿರುವ ಅರೆಕಾಲಿಕ ಉಪನ್ಯಾಸಕರು ಇದ್ದರು. ಅವರುಗಳನ್ನು ಮೀಸಲಾತಿ ನಿಯಮಗಳನ್ವಯ ಇಲಾಖೆಯಲ್ಲಿ ಕಾರ್ಯಭಾರಕ್ಕನುಗುಣವಾಗಿ ಖಾಲಿ ಇರುವ ಹುದ್ದೆಗಳ ಎದುರಾಗಿ ಸೇವಾ ಸಕ್ರಮಾತಿ ಮಾಡಲಾಗಿದ್ದು, ಇನ್ನು 331 ಅರೆಕಾಲಿಕ ಉಪನ್ಯಾಸಕರನ್ನು ಸೇವಾ ಸಕ್ರಮಗೊಳಿಸಬೇಕಾಗಿದೆ.

ಇ) ಅರೆಕಾಲಿಕ ಉಪನ್ಯಾಸಕರುಗಳು ಹಾಲಿ ಜಾರಿಯಲ್ಲಿರುವ ನೇಮಕಾತಿ ನಿಯಮಗಳನ್ವಯ ಎನ್ಇಟಿ/ ಎಸ್ಎಲ್ಇಟಿ ಪದವಿಯನ್ನು ಪೂರೈಸಿದಲ್ಲಿ ಆದ್ಯತೆ ಮೇರೆಗೆ ಸೇವಾ ಸಕ್ರಮಾತಿಗೊಳಿಸಲು ಕ್ರಮ ಜರುಗಿಸಲಾಗುವುದು.

ಈ) ಮೇಲಿನಂತೆ.

ಉ) ಮೇಲಿನಂತೆ.